ಕಥೆಗಾರ, ಕಾದಂಬರಿಕಾರ ಕಾ.ತ. ಚಿಕ್ಕಣ್ಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದವರು. ಪ್ರಸ್ತುತ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಮುಖ್ಯಸ್ಥರು. 'ಬಿಳಲು ಬಿಟ್ಟ ಬದುಕು', 'ಒಡಲುರಿ', 'ವಾಸನಾಮಯ ಬದುಕಿನ ಆಚೆ ಈಚೆ', 'ಮನಸ್ಸು ಮುಗಿಲು', 'ಮುಂಜಾವು', 'ಬಳ್ಳಿಸಾಲು', 'ಮಳೆ ಬಯಲು' ಹಾಗೂ 'ಪುರಾಣಕನ್ಯೆ' ಅವರ ಕೆಲವು ಪ್ರಮುಖ ಕೃತಿಗಳು

ಜಿಟಿಗರಿಯುವ ಜನ... ಮುಗಿಲು ಮೂಸುತ್ತಿರುವ ಕಟ್ಟಡಗಳು... ಯಾವುದರಲ್ಲಿ ವ್ಯತ್ಯಾಸ? ಅವನಿಗೆ ತಿಳಿಯಲೊಲ್ಲದು. ಚಾಕರಿಗೆ ಹಸಿದು ಬಂದವನು; ಅದೊಂದೇ ಎಲ್ಲ !!

ಆದರೆ ಇವತ್ತು ಅವ್ವ, ಊರು ಸೆಳೆಯತೊಡಗಿದ ಮೇಲೆ ಅವನಿಗೆ ಇದೊಂದು ಬೇಡದ ಬದುಕು ಅನಿಸಿತ್ತು. ನಿನ್ನೆ, ಮೊನ್ನೆಗಳಲ್ಲಿ ಸಮಯ ದೂಡುವುದೇ ಕಷ್ಟವೆನಿಸಿದ್ದರೆ ಇವತ್ತು ಸಮಯವೇ ಸಾಗುತ್ತಿಲ್ಲ. ಆಟೋ ಸರಿಯುತ್ತಿಲ್ಲ. ಜನ, ವಾಹನಗಳು ಮುಂದೆ ಮುಂದಕ್ಕೆ ಚಲಿಸುತ್ತಿಲ್ಲ. ಅವನಿಗೆ ಕಿರಿಕಿರಿ ಅನಿಸತೊಡಗಿತು. ಅದನ್ನು ಮರೆಯಲೆಂಬಂತೆ ಇನ್ನೂ ಕೈಯಲ್ಲೇ ಇದ್ದ ಕನ್ನಡಿ ಚೂರನ್ನು ಮುಖಕ್ಕೆ ಹಿಡಿದು ನೋಡಿಕೊಂಡ. ಬೆಳೆದ ಗಡ್ಡ, ಕೆದರಿದ ತಲೆ ಕೂದಲನ್ನು ಇನ್ನೊಮ್ಮೆ ಅಳೆದು ಸುರಿದ. ಈ ವೇಷದಲ್ಲಿ ಹೋದರೆ ಅವ್ವ ಎದೆ ಬಡಿದುಕೊಳ್ಳುತ್ತಾಳೆ. ಅವಳ ಬಳಿಗೆ ನೀಟಾಗಿ ಹೋಗಬೇಕು. ಅವಳು ಸೈ ಕನಪ್ಪ ಅನ್ನಬೇಕು...



ಮಾದೇವನ ಮನಸ್ಸು ತಿಳಿ ನಿಲುವಿಗೆ ಖರೀದಿಸುವುದು ಬಂದಂತನಿಸಿತು. ಕೂಲಿ ಹಣವನ್ನು ಜೋಪಾನ ಮಾಡಬೇಕು ಅಂತ ಲೆಕ್ಕ ಹಾಕಿದ್ದ. ಜೊತೆಯಲ್ಲೇ ಮೂರು ಆಸೆಗಳು ಹುಟ್ಟಿದ್ದವು. ಈ ಲೆಕ್ಕದಲ್ಲೇ ಆ ಮೂರು ಆಸೆ ತೀರಿಸಿಕೊಳ್ಳಬೇಕು ಅಂತ ಬಯಕೆ ಪಟ್ಟಿದ್ದ. ಒಂದು– ಮೊಬೈಲ್ ಖರೀದಿಸುವುದು. ಎರಡು– ಹೊಸ ಶರ್ಟು-ಪ್ಯಾಂಟ್ ಕೊಳ್ಳುವುದು. ಮೂರು– ರೇಜರ್ ಖರೀದಿಸಿ ನುಣ್ಣಗೆ ಗಡ್ಡ ಬೋಳಿಸಿಕೊಳ್ಳುವುದು. ಯಾಕೆಂದರೆ ತಿಂಗಳ ಹಿಂದೆ ಇದೇ ಕಸದ ರಾಶಿಯೊಳಗೆ ಸಿಕ್ಕ ರೇಜರಿನಿಂದ ಗಡ್ಡ ಬೋಳಿಸಿಕೊಳ್ಳಲು ಹೋಗಿ ಚರ್ಮ ಕಿತ್ತುಕೊಂಡಿದ್ದಾಗಿತ್ತು. ಈಗ ಈ ಲೆಕ್ಕದಲ್ಲಿ ಮೊಬೈಲ್ ಫೋನ್ ಬೇಡವಾಗಿತ್ತು. ಈ ಮೊಬೈಲ್ ಮನುಷ್ಯನೊಂದಿಗಿನ ಮಾತು ಕಿತ್ತುಕೊಂಡು ಬಿಡುತ್ತದೆ ಅಂತ ಡ್ರೈವರಣ್ಣನ ಸಹವಾಸದಿಂದಾಗಿ ನಿರುತ್ಸಾಹ ಮೂಡಿತ್ತು. ಒಟ್ಟನಲ್ಲಿ ಎಲ್ಲ ಹೊಂದಾಣಿಕೆ ಮಾಡಿಕೊಂಡು ಯಾರೂ ಏಳದ ಮುಂಚೆ ಉತ್ತರಹಳ್ಳಿ ರಸ್ತೆಯಂಚಿನಲ್ಲಿರುವ ನಲ್ಲಿಗೆ ಮೈಯೊಡ್ಡಿ ಸ್ವಚ್ಛವಾಗಿಬಿಡಬೇಕು... ಅವ್ವನ ಮುಂದೆ ಪಳಪಳ ಹೊಳೆಯುತ್ತ ನಿಲ್ಲಬೇಕು...

ಮಾದೇವ, ನಾಳೆ ಹೊತ್ತು ಹುಟ್ಟುವ ಮುಂಚೆ ಬಸ್ಸು ಹತ್ತಿಬಿಡಬೇಕು ಅಂತ ಕೈ ಹಸ್ತವನ್ನು ಪಕ್ಕದ ಪ್ಲಾಸ್ಟಿಕ್ ಚೀಲಕ್ಕೆ ತಬಲದಂತೆ ಬಡಿದ. ಆ ಬಡಿತದ ಲಯಕ್ಕೆ ಚೀಲದ ಮೇಲೆ ಸುರಿದಿದ್ದ ಕಸದ ಮಾವಿನಹಣ್ಣಿನ ಕೊಳೆತ ರಸ ಭುಜಕ್ಕೆ ಸಿಡಿಯಿತು. ಇದು ಆ ಮಹಾತಾಯಿ ಕೃಪೆ ಅಂದುಕೊಂಡ. ಇನ್ನೇನು ಆಟೋ ಹೊರಡಬೇಕು ಅನ್ನುವಷ್ಟರಲ್ಲಿ ಆ ತಾಯಿ ಬಂದು ಪ್ಲಾಸ್ಟಿಕ್ ಚೀಲದ ಕಸವನ್ನೆಲ್ಲ ಸುರಿದು ಚೀಲವನ್ನು ವಾಪಸ್ಸು ತೆಗೆದುಕೊಂಡು ಹೋಗಿದ್ದಳು. ಅವಳ ಉಳಿತಾಯದ ಫಲ ತನ್ನ ಭುಜವೇರಿತ್ತು. ಮಾದೇವನ ಮನಸ್ಸು ಖಿನ್ನಗೊಂಡಿತು. ಹಾರಿದ್ದ ಸಿಪ್ಪೆಯ ರಸವನ್ನು ನಿಧಾನಕ್ಕೆ ಒರೆಸಿಕೊಳ್ಳತೊಡಗಿದ.

ಈಗ ಆಟೋ ವಟರುಗರಿಯುತ್ತಾ ರಿಂಗ್ ರೋಡಿನ ಅಂಚಿನಲ್ಲಿದ್ದ ಪಾಳಿಗೆ ಬಂದು ತಲುಪಿತು. ಆಗಲೇ ಅಲ್ಲಿಗೆ ಹತ್ತಾರು ಕಸದ ಆಟೋಗಳು, ಐದಾರು ಕಸದ ಮಿನಿ ಟ್ರಕ್ಕುಗಳು ಬಂದು ನಿಂತಿದ್ದವು. ತಮ್ಮ ಆಟೋ ಕಸ ವಿಲೇವಾರಿ ಜಾಗ ತಲುಪಿದ್ದಕ್ಕೆ ಈಗ ಮಾದೇವನ ಮನಸ್ಸು ಹಗುರವಾಯಿತು.

ಮಾದೇವ ಮೈಕೈ ಒದರಿಕೊಂಡು